# ಬಗೆ ಬಗೆಯ ಬಿಗೋನಿಯಾ!

ಚಿತ್ರ ಬರಹ:
**ಶೈಲಜಾ ಚಂದ್ರಶೇಖರ**



ಪಶ್ಚಿಮ ಘಟ್ಟದ ಬೃಹದಾಗ್ರತ್ರದ ಮರಗಳ ಬುಡದಲ್ಲಿ ಕವಿದ ಹಸಿರು ನೆರಳಿನ ನಡುವೆ ಇಣುಕುವ ಪುಟ್ಟದೊಂದು ಗಿಡ. ನೋಡಲು ಆಕರ್ಷಕವಾದ ಕಿವಿಯಂತಹ ಹಸಿರು ಎಲೆಗಳು. ಮೇಲೆಲ್ಲ ಬಿಳಿಯ ಪುಟ್ಟ ಬೊಟ್ಟುಗಳು. ತೂಗು ಬಿದ್ದ ಗುಲಾಬಿ ಬಣ್ಣದ ಹೂಗಳ ಗೊಂಚಲು. ಕಾನನದ ಇತರ ಸಿರಿಯ ನಡುವೆ ತನ್ನದೊಂದು ಛಾಪು ಒತ್ತಿದ ಈ ಸಸ್ಯದ ಹೆಸರು 'ಬಿಗೋನಿಯಾ ಮಲಬಾರಿಕ'. ಬಿಗೋನಿಯೇಸಿ ಕುಟುಂಬಕ್ಕೆ ಸೇರಿದ ಗಿಡಗಳಿಗೆಲ್ಲಾ 17ನೇ ಶತಮಾನದ ಹೈಟಿಯ ಗವರ್ನರ್ ಮೈಕೆಲ್ ಬಿಗೋನ್‌ನ ಗೌರವಾರ್ಥ ಇಟ್ಟ ಬಿಗೋನಿಯಾ ಎಂಬ ಹೆಸರು.

ಏಷಿಯಾ, ಆಫ್ರಿಕಾ, ದಕ್ಷಿಣ ಹಾಗೂ ಮಧ್ಯೆ ಅಮೆರಿಕಾಗಳಲ್ಲಿ ಕಾಣಬರುವ ಬಿಗೋನಿಯಾಗಳು ಬರೀ ಬೆಚ್ಚನೆಯ ಕಾಡುಗಳಿಗೆ ಮಾತ್ರ ಸೀಮಿತವಾಗಿಲ್ಲ. ಈಗ ಸುಮಾರು 900ಕ್ಕೂ ಹೆಚ್ಚು ಜಾತಿಯ ಅಲಂಕಾರಿಕ ಬಿಗೋನಿಯಾಗಳು ಇದ್ದು, ಹೂ ತೋಟಗಳಲ್ಲಿ ರಾರಾಜಿಸುತ್ತಿವೆ. ಹೊಸ ತರಹದ ಹೈಬ್ರಿಡ್ ಬಿಗೋನಿಯಾಗಳನ್ನಂತೂ ದಿನದಿನವೂ ಅಭಿವೃದ್ಧಿ ಪಡಿಸುತ್ತಿದ್ದಾರೆ.

ಸಾಮಾನ್ಯವಾಗಿ ಹೆಚ್ಚಿನ ಎಲ್ಲ ಬಿಗೋನಿಯಾಗಳ ಎಲೆಗಳು ಕಿವಿಯಂತೆ ಒಂದೆಡೆಗೆ ಓರೆಯಾಗಿದ್ದು ದಪ್ಪವಾಗಿ ರಸಭರಿತವಾಗಿರುತ್ತವೆ. ದುಂಡಗಿರುವ ಎಲೆಗಳನ್ನು ಹೊಂದಿರುವ ಬಿಗೋನಿಯಾಗಳು ಮರಿಹುಲಿ ಹೆಜ್ಜೆಯನ್ನು ಹೋಲುವುದರಿಂದ ಬಿಗೋನಿಯೇಸಿ ಕುಟುಂಬವನ್ನು 'ಟೈಗರ್ ಕಿಟ್ಟೆನ್' ಕುಟುಂಬವೆಂದು ಕರೆಯುವುದುಂಟು. ಬಿಗೋನಿಯಾಗಳು ಹೂವಿಗಿಂತಲೂ ತಮ್ಮ ವರ್ಣರಂಜಿತ ಎಲೆಗಳಿಂದಾಗಿಯೇ ಪ್ರಸಿದ್ಧಿ ಹೊಂದಿದೆ. ಇನ್ನು 'ಬಿಗೋನಿಯಾ ರೆಕ್ಸ್' ಜಾತಿಯ ಹೈಬ್ರಿಡ್‌ಗಳಂತೂ ಎಣೆಯಿಲ್ಲದ ಬಣ್ಣ ಚಿತ್ತಾರಗಳಿಂದಾಗಿ ಅಚ್ಚುಮೆಚ್ಚು ಎನಿಸಿದೆ.

ಬಿಗೋನಿಯಾಗಳನ್ನು ಉದ್ದನೆಯ ಪೊದರು, ಹಬ್ಬಿ ಬೆಳೆಯುವ ಬಳ್ಳಿ, ಪ್ರಕಂದವನ್ನು ಹೊಂದಿದ ಗಿಡ್ಡ ಗಿಡಗಳು ಹಾಗೂ ಆಕರ್ಷಕ ಹೂಗಳನ್ನು ಬಿಡುವ ಗೆಡ್ಡೆ ಬಿಗೋನಿಯಾಗಳಾಗಿ ವಿಂಗಡಿಸಬಹುದು. ನೇರವಾಗಿ ಬಿಸಿಲು ಬೀಳದ ಪೋರ್ಟಿಕೊ, ಉದ್ಯಾನದ ಮೂಲೆ, ಕಿಟಕಿಯ ಬದಿ ತೂಗು ಹಾಕಿದ ಕುಂಡಗಳಲ್ಲಿ ಬಿಗೋನಿಯಾವನ್ನು ಬೆಳೆಸುವಾಗ ಬೆಳಕು ಚೆನ್ನಾಗಿ ಸಿಗುವಂತೆ ನೋಡಬೇಕು. ಕುಂಡದಲ್ಲಿ ಮರಳುಮಿಶ್ರಿತ ಮಣ್ಣಿನಿಂದ ನೀರು ಇಳಿದು ಹೋಗುವಂತಿರಬೇಕು. ಹೀಗೆ ನೆಡುವುದರಿಂದ ಬಿಗೋನಿಯಾವನ್ನು ಭಾದಿಸುವ ಗಿಡಹೇನುಗಳು ಮತ್ತು ಬೂಷ್ಟುಗಳಿಂದ ರಕ್ಷಿಸಬಹುದು. ಪ್ರಕಂದದ ಚೂರು, ಕಾಂಡದ ತುಂಡು, ಉದ್ದ ದೇಟಿರುವ ಎಲೆಗಳನ್ನು ಒದ್ದೆ ಮರಳಿನಲ್ಲಿ ನೆಟ್ಟು ಆಗಾಗ ನೀರು ಚಿಮುಕಿಸುತ್ತಿದ್ದರೆ ಕೆಲವೇ ದಿನಗಳಲ್ಲಿ ಹೊಸಬೇರುಗಳು ಮೊಳೆಯುತ್ತವೆ, ಹೊಸ ಗಿಡಗಳಾಗುತ್ತವೆ. ಮರಳುಮಿಶ್ರಿತ ಹೂದಲು ಮಣ್ಣಿನಲ್ಲಿ ಹೊಸ ಗಿಡಗಳನ್ನು ನೆಡಬಹುದು.

ಚೀನೀಯರು ಬಿಗೋನಿಯಾವನ್ನು ಗಾಯವನ್ನು ಶುದ್ಧಪಡಿಸಲು ಮತ್ತು ಊತವನ್ನು ಇಳಿಸಲು ಉಪಯೋಗಿಸುತ್ತಾರೆ. ಅನೇಕ ಬಿಗೋನಿಯಾಗಳನ್ನು ಬ್ರೆಜಿಲಿಯನ್ನರು ಮತ್ತು ಇಂಡೋನೇಷ್ಯನ್ನರು ಆಹಾರವಾಗಿ ಬಳಸುವುದುಂಟು. ವಿಟಮಿನ್ 'ಸಿ'ಯ ಆಕರವಾದ ಬಿಗೋನಿಯಾಗಳನ್ನು ಸಿಟ್ರಸ್ ಹಣ್ಣುಗಳ ಅಭಾವದಲ್ಲಿ ಉಪಯೋಗಿಸುತ್ತಿದ್ದರಂತೆ. ಬಿಗೋನಿಯಾ ಹೂಗಳನ್ನು ಸಲಾಡ್‌ಗಳ ಅಲಂಕಾರಕ್ಕೆ ಬಳಸುತ್ತಾರೆ.